Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

ಐಶ್ವರ್ಯ
ಸಂಪುಟ: 4 ಸಾಪ್ತಾಹಿಕ ಸಂಚಿಕೆ : 17
ದಿನಾಂಕ: 28.10.2025



Rtn. Anil Kumar
President



Rtn. Krishnappa
Secretary

## ರೋಟರಿ ಐಸಿರಿಯಿಂದ "ಸಮುದಾಯದ ಆರ್ಥಿಕತೆ ಅಭಿವೃದ್ಧಿ" ಮಾಹಿತಿ ಕಾರ್ಯಾಗಾರ



ರೋಟರಿ ಐಸಿರಿ ಪರ್ಕಳ, ಐಸಿರಿ ಸಮುದಾಯ ದಳ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಸೇವಾಸಂಘದ ಜಂಟಿ ಆಯೋಜಕತ್ವದಲ್ಲಿ ತಾರೀಕು 26/10/2025 ಭಾನುವಾರದಂದು ಪರ್ಕಳದ ನಾರಾಯಣಗುರುಸಭಾ ಭವನದಲ್ಲಿ "ವೈಯಕ್ತಿಕ ಹಾಗೂ ವ್ಯವಹಾರಿಕ ರಂಗದಲ್ಲಿ ಹಣಕಾಸು ನಿರ್ವಹಣೆ ಹಾಗೂ ಸ್ವ-ಉದ್ಯೋಗದ ಬಗ್ಗೆ ಅರಿವು" ಎಂಬ ಕಾರ್ಯಾಗಾರವು ಜರುಗಿತು.

ಸಂಪನ್ಮೂಲ ವ್ಯಕ್ತಿ, ನಮ್ಮ ಸದಸ್ಯ ಜೆಸಿಐ ಸೆನೆಟರ್ ಮತ್ತು ರಾಷ್ಟ್ರೀಯ ತರಬೇತುದಾರ ರೊ. ರಾಜೇಶ್ ಡಿ. ಶೆಣೈ ಅವರು ಸ್ವಂತ ಮತ್ತು ಕುಟುಂಬದ ಹಣಕಾಸು ನಿರ್ವಹಣೆ, ಆದಾಯವೃದ್ಧಿಗೆ ಪೂರಕವಾಗಿ ಲಭ್ಯವಿರುವ ಅವಕಾಶಗಳು, ಹೂಡಿಕೆಯ ವಿಷಯಗಳಲ್ಲಿ ನಮಗಿರಬೇಕಾದ ಸಾಮಾನ್ಯ ಜ್ಞಾನ, ಸರಕಾರದ ಮೂಲಸೌಕರ್ಯ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳು, ಮತ್ತು ಸಮುದಾಯದ ಆರ್ಥಿಕತೆ ಅಭಿವೃದ್ಧಿಯಲ್ಲಿ ಈ ಎಲ್ಲಾ ಅಂಶಗಳ ಪಾತ್ರದ ಬಗ್ಗೆ ಸೂಕ್ಷ್ಮವಾಗಿ ವಿವರಿಸಿ, ನೆರೆದವರಲ್ಲಿ ಅರಿವು ಮೂಡಿಸಿದರು.

ಜೊತೆಗೆ ಸ್ಥಳೀಯವಾಗಿ ನಮ್ಮ ಪರಿಸರಕ್ಕೆ ಒಗ್ಗುವ ಹಲವಾರು ಸ್ವ-ಉದ್ಯೋಗ ಅವಕಾಶಗಳನ್ನು, ಬ್ಯಾಂಕುಗಳು ಮತ್ತು ಸರಕಾರೀ ಸಂಸ್ಥೆಗಳಿಂದ ಸಿಗುವ ಉತ್ತೇಜನಗಳ ಬಗ್ಗೆ ಮಾಹಿತಿ ನೀಡಿ, ನಾವಿಂದು ಯಾವುದೇ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದರೂ, ನಿರಂತರವಾಗಿ, ಕಾಲಕಾಲಕ್ಕೆ ಕೌಶಲ್ಯ ಅಭಿವೃದ್ಧಿ ಪಡಿಸಿಕೊಳ್ಳುವಂತೆ ಕರೆ ನೀಡಿದರು.

ಆರಂಭದಲ್ಲಿ ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರಿಗೆ ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಮತ್ತು ಐಸಿರಿ ಸಮುದಾಯದಳದ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀಯವರಿಗೆ ಶ್ರೀಮತಿ ಜಯಂತಿಯವರು ಕೊರಳ ಲಾಂಛನ ತೊಡಿಸಿದರು.

ರೊ. ಅನಿಲ್ ಕುಮಾರ್ ಅವರು ಸ್ವಾಗತಿಸಿದರು. ರೊ ಸ್ಮಿತಾ ಜಿ. ಕಾಮತ್ ಪ್ರಾಸ್ತಾವಿಕವಾಗಿ ಮಾತಾಡಿದರು. ರೊ ಸುನಿಲ್ ಕುಮಾರ್ ರೊ. ರಾಜೇಶ್ ಡಿ. ಶೆಣೈ ಅವರನ್ನು ಸಭೆಗೆ ಪರಿಚಯಿಸಿದರು.

ರೊ. ಕೆ. ಪ್ರಕಾಶ್ ಶೆಣೈ ಹಾಗೂ ರೊ. ಅನಿಲ್ ಕುಮಾರ್ ಕಾರ್ಯಾಗಾರದಲ್ಲಿ ನೀಡಿದ ಮಾಹಿತಿಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ರೊ. ಗುರುಪ್ರಸಾದ್ ಕಾಮತ್ ಕಾರ್ಯಕ್ರಮ ನಿರೂಪಿಸಿದರು. ಸಮುದಾಯದಳದ ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿ ಅವರು ಧನ್ಯವಾದ ಸಮರ್ಪಿಸಿದರು.

ಬ್ರಹ್ಮಶ್ರೀ ನಾರಾಯಣಗುರು ಸೇವಾಸಂಘದ ಕಾರ್ಯದರ್ಶಿ ಶ್ರೀ ಲೋಕೇಶ್ ಪೂಜಾರಿ ಮತ್ತು ಕೋಶಾಧಿಕಾರಿ ಶ್ರೀ ಭಾಸ್ಕರ ಸಿ. ಪೂಜಾರಿಯವರು ಸಭಾವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಸಮುದಾಯದ ಆರ್ಥಿಕ ಅಭಿವೃದ್ಧಿಯಲ್ಲಿ ಸರ್ಕಾರದ ಯೋಜನೆಗಳ ಪಾತ್ರ**

ಭಾರತವು ಗ್ರಾಮೀಣ ಮತ್ತು ನಗರ ಸಮುದಾಯಗಳಿಂದ ಕೂಡಿದ ದೇಶವಾಗಿದ್ದು, ಅವರ ಆರ್ಥಿಕ ಅಭಿವೃದ್ಧಿ ರಾಷ್ಟ್ರದ ಸಮಗ್ರ ಪ್ರಗತಿಗೆ ಅತ್ಯಂತ ಅವಶ್ಯಕವಾಗಿದೆ. ಸಮುದಾಯದ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಸರ್ಕಾರವು ವಿವಿಧ ಯೋಜನೆಗಳನ್ನು ರೂಪಿಸಿ ಹಂತ ಹಂತವಾಗಿ ಜಾರಿಗೆ ತಂದಿದೆ. ಈ ಯೋಜನೆಗಳ ಉದ್ದೇಶ ಜನರ ಜೀವನಮಟ್ಟವನ್ನು ಸುಧಾರಿಸುವುದು ಮತ್ತು ಬಡತನವನ್ನು ನಿರ್ಮೂಲಗೊಳಿಸುವುದಾಗಿದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA) ಗ್ರಾಮೀಣ ಜನರಿಗೆ ಕನಿಷ್ಠ 100 ದಿನಗಳ ಉದ್ಯೋಗದ ಭರವಸೆಯನ್ನು ನೀಡುತ್ತದೆ. ಇದರ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಆದಾಯದ ಮೂಲಗಳು ವಿಸ್ತರಿಸಿವೆ.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಗ್ರಾಮ ಮತ್ತು ನಗರಗಳ ನಡುವಿನ ಸಂಪರ್ಕವನ್ನು ಬಲಪಡಿಸಿ ವ್ಯಾಪಾರ, ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ.

ಜನಧನ್ ಯೋಜನೆ ಹಣಕಾಸಿನ ಒಳಗೊಂಡಿಕೆಯನ್ನು ಸಾಧಿಸಿ ಪ್ರತಿಯೊಬ್ಬ ನಾಗರಿಕನಿಗೂ ಬ್ಯಾಂಕ್ ಸೇವೆಗಳನ್ನು ಲಭ್ಯಗೊಳಿಸಿದೆ. ಉಜ್ವಲಾ ಯೋಜನೆ ಗ್ರಾಮೀಣ ಮಹಿಳೆಯರ ಜೀವನಮಟ್ಟವನ್ನು ಸುಧಾರಿಸಿ ಅವರ ಆರೋಗ್ಯ ಮತ್ತು ಸಮಯದ ಸಂರಕ್ಷಣೆಗೆ ಸಹಕಾರಿಯಾಗಿದೆ.

ಸ್ವಚ್ಛ ಭಾರತ ಅಭಿಯಾನ ಆರೋಗ್ಯಕರ ಪರಿಸರ ನಿರ್ಮಾಣದ ಮೂಲಕ ಆರ್ಥಿಕ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದೆ.

ಮೇಕ್ ಇನ್ ಇಂಡಿಯಾ ಮತ್ತು ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಗಳು ಯುವಜನತೆಗೆ ಉದ್ಯಮಶೀಲತೆಯ ಅವಕಾಶಗಳನ್ನು ಒದಗಿಸಿ, ಈ ಮೂಲಕ ದೇಶದಲ್ಲಿ ಸ್ವಾವಲಂಬನೆ ಮತ್ತು ಉದ್ಯೋಗ ಸೃಷ್ಟಿ ಉತ್ಸಾಹವು ಹೆಚ್ಚಿದೆ.

ಆಯುಷ್ಮಾನ್ ಭಾರತ ಯೋಜನೆ ಬಡಜನರಿಗೆ ಆರೋಗ್ಯ ರಕ್ಷಣೆಯ ಸುರಕ್ಷಾ ಬಲೆಯನ್ನು ಒದಗಿಸಿದೆ.

ದೀನದಯಾಳ ಅಂತ್ಯೋದಯ ಯೋಜನೆ ಮತ್ತು ಸ್ವಯಂಸಹಾಯ ಗುಂಪುಗಳು (SHGs) ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಮಹತ್ವದ ಪಾತ್ರವಹಿಸುತ್ತಿವೆ.

ಗ್ರಾಮ ಒನ್ (Grama One):ಗ್ರಾಮೀಣ ಜನರಿಗೆ ಸರ್ಕಾರದ ಎಲ್ಲಾ ಸೇವೆಗಳು, ಪ್ರಮಾಣಪತ್ರಗಳು ಮತ್ತು ಯೋಜನೆಗಳ ಮಾಹಿತಿ ಒಂದು ಸ್ಥಳದಲ್ಲೇ ಲಭ್ಯವಾಗುವ ವ್ಯವಸ್ಥೆ.

ಅನ್ನಭಾಗ್ಯ ಯೋಜನೆ:ಬಡ ಮತ್ತು ಅಲ್ಪ ಆದಾಯದ ಕುಟುಂಬಗಳಿಗೆ ಉಚಿತ ಧಾನ್ಯ ವಿತರಣೆ ಮೂಲಕ ಆಹಾರ ಸುರಕ್ಷತೆ ಒದಗಿಸುವ ಯೋಜನೆ.

ಅಶ್ರಯ ಯೋಜನೆ:ಬಡಜನರಿಗೆ ಗೃಹ ನಿರ್ಮಾಣಕ್ಕೆ ಸಹಾಯಧನ ನೀಡುವ ಮೂಲಕ ವಾಸಸ್ಥಾನವನ್ನು ಖಚಿತಪಡಿಸುವ ಯೋಜನೆ.

ಶಕ್ತಿ ಯೋಜನೆ:ಮಹಿಳೆಯರಿಗೆ ಉಚಿತ ಸಾರ್ವಜನಿಕ ಬಸ್ ಪ್ರಯಾಣ ಸೌಲಭ್ಯ ನೀಡುವ ಮೂಲಕ ಅವರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣ.

ಯಶಸ್ವಿನಿ ಆರೋಗ್ಯ ಯೋಜನೆ:ಗ್ರಾಮೀಣ ಪ್ರದೇಶದ ಜನರಿಗೆ ಕಡಿಮೆ ವೆಚ್ಚದಲ್ಲಿ ಆರೋಗ್ಯ ಸೇವೆ ನೀಡುವ ಸಹಕಾರಿ ಆರೋಗ್ಯ ವಿಮಾ ಯೋಜನೆ.

ಕೃಷಿ ಸೌಭಾಗ್ಯ ಯೋಜನೆ:ರೈತರಿಗೆ ನೀರಾವರಿ, ವಿದ್ಯುತ್ ಸೌಲಭ್ಯ ಮತ್ತು ಕೃಷಿ ಉತ್ಪಾದನೆಗೆ ಸಹಾಯಧನ ನೀಡುವ ಯೋಜನೆ.

ಉದ್ಯಮಿ ಯೋಜನೆ: ಸಣ್ಣ ಮತ್ತು ಮಧ್ಯಮ ಉದ್ಯಮಿಗಳಿಗೆ ಆರ್ಥಿಕ ನೆರವು ಮತ್ತು ತರಬೇತಿ ನೀಡುವ ಯೋಜನೆ.

ಶ್ರಮಶಕ್ತಿ ಯೋಜನೆ: ನಿರುದ್ಯೋಗಿ ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಉದ್ಯೋಗ ಸೃಷ್ಟಿಸುವ ಯೋಜನೆ.

ಗ್ರಾಮ ವಿಕಾಸ ಯೋಜನೆ: ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಹಾಗೂ ಸ್ವಚ್ಛತೆ ಮುಂತಾದ ಮೂಲಸೌಕರ್ಯ ಅಭಿವೃದ್ಧಿ.











## ಬೌದ್ಧಿಕ ಸಿರಿ

### ದೃಷ್ಟಿ ಬದಲಾದರೆ ದೃಶ್ಯ ಬದಲಾಗುತ್ತದೆ

ಒಂದು ಆಸ್ಪತ್ರೆಯ ಕೋಣೆಯಲ್ಲಿ ಇಬ್ಬರು ಗಂಭೀರ ಕಾಯಿಲೆಗೆ ತುತ್ತಾದ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದರು. ಒಬ್ಬ ರೋಗಿಯ ಹಾಸಿಗೆ ಕೋಣೆಯ ಕಿಟಕಿಯ ಪಕ್ಕದಲ್ಲಿ ಇತ್ತು. ಮತ್ತೊಬ್ಬನದು ಒಳಭಾಗದ ಗೋಡೆಯ ಹತ್ತಿರ.

ಕಿಟಕಿಯ ಪಕ್ಕದಲ್ಲಿದ್ದ ರೋಗಿಯು ಪ್ರತಿದಿನ ಸಂಜೆ ಮತ್ತೊಬ್ಬ ರೋಗಿಗೆ ಹೊರಗಿನ ದೃಶ್ಯಗಳ ಬಗ್ಗೆ ವಿವರಿಸುತ್ತಿದ್ದ. ಹೊರಗೆ ಆಟವಾಡುತ್ತಿರುವ ಮಕ್ಕಳ ಬಗ್ಗೆ, ತೂಗಾಡುತ್ತಿರುವ ದೋಣಿಗಳ ಬಗ್ಗೆ, ಆಕಾಶದಲ್ಲಿ ಹಾರಾಡುತ್ತಿರುವ ಹಕ್ಕಿಗಳ ಬಗ್ಗೆ... ‘ನೋಡು, ಇಂದು ಆಕಾಶ ಎಷ್ಟು ನೀಲಿಯಾಗಿದೆ! ಹಸಿರು ಗದ್ದೆಗಳಲ್ಲಿ ಮಕ್ಕಳು ಓಡಾಡುತ್ತಿದ್ದಾರೆ... ಚಿಟ್ಟೆಗಳು ಹಾರುತ್ತಿವೆ... ಕತ್ತೆಗಾಡಿ ಹೋಗುತ್ತಿದೆ...” ಎಂದು ಆತ ಉತ್ಸಾಹದಿಂದ ಹೇಳುತ್ತಿದ್ದನು. ವಿವರಣೆಗಳು ಕೇವಲ ಮಾತಲ್ಲ; ಅವು ಬದುಕಿನ ಬಣ್ಣಗಳು, ಆಶೆಯ ಕಣಗಳು, ಕೇಳುವವನ ಮನಸ್ಸಿನಲ್ಲಿ ಹೊಸ ಉತ್ಸಾಹವನ್ನು ತುಂಬುತ್ತಿದ್ದವು.

ಆತನ ಮಾತನ್ನು ಕೇಳುತ್ತಾ ಗೋಡೆ ನೋಡುತ್ತಿದ್ದ ರೋಗಿಗೆ ತನ್ನ ಕಾಯಿಲೆಯ ನೋವು ಕಡಿಮೆ ಆಗುತ್ತಿದ್ದಂತೆ ಅನಿಸುತ್ತಿತ್ತು. ಕಿಟಕಿಯ ಪಕ್ಕದಲ್ಲಿದ್ದ ರೋಗಿ ಹೇಳುವ ಹೊರಗಿನ ಸುಂದರ ದೃಶ್ಯಗಳನ್ನು ಕಲ್ಪಿಸಿಕೊಳ್ಳುತ್ತಾ ಆತ ಸಂತೋಷ ಪಡುತ್ತಿದ್ದ.

ಹೀಗೆ ಹಲವು ದಿನಗಳು ಕಳೆದವು. ಒಂದು ದಿನ ಕಿಟಕಿಯ ಪಕ್ಕದಲ್ಲಿದ್ದ ರೋಗಿ ಶಾಂತವಾಗಿ ಮೃತಪಟ್ಟ. ಅವನನ್ನು ಹೊರಗೆ ತೆಗೆದುಕೊಂಡು ಹೋದ ನಂತರ, ಗೋಡೆ ನೋಡುತ್ತಿದ್ದ ರೋಗಿಯು ಕಿಟಕಿಯ ಪಕ್ಕದ ಹಾಸಿಗೆಗೆ ಸ್ಥಳಾಂತರಿಸಲು ವೈದ್ಯರಲ್ಲಿ ವಿನಂತಿಸಿ, ಈಡೇರಿಸಿಕೊಂಡನು.

ಆತ ತುಂಬು ಉತ್ಸಾಹದಿಂದ ಕಿಟಕಿಯ ಮೂಲಕ ಹೊರಗೆ ನೋಡಿದ. ಆದರೆ ಅಲ್ಲಿ ಅವನಿಗೆ ಏನೂ ಕಾಣಿಸಲಿಲ್ಲ. ಎದುರಿಗೆ ಇದ್ದದ್ದು ಕೇವಲ ಒಂದು ಬಿದಿರು ಗೋಡೆ. ಇದರಿಂದ ರೋಗಿಗೆ ಆಶ್ಚರ್ಯವಾಯಿತು. ಇಷ್ಟು ದಿನ ಕಿಟಕಿಯ ಬಳಿಯಲ್ಲಿದ್ದ ರೋಗಿ ಹೇಳುತ್ತಿದ್ದ ಸುಂದರವಾದ ದೃಶ್ಯಗಳ ಕಥೆ ಏನಾಗಬಹುದು?

ಅವನಿಗೆ ಆಗ ಅರ್ಥವಾಯಿತು – ಅವನ ಸ್ನೇಹಿತನು ಹೊರಗಿನ ದೃಶ್ಯವನ್ನು ನೋಡಿರಲಿಲ್ಲ; ಆದರೆ ತನ್ನ ಒಳಗಿನ ದೃಷ್ಟಿಯಿಂದ ಒಂದು ಸುಂದರ ಲೋಕವನ್ನು ಕಟ್ಟಿಕೊಂಡಿದ್ದನು.

ಅವನು ತನ್ನ ಸಕಾರಾತ್ಮಕ ದೃಷ್ಟಿಯಿಂದ, ನೋವಿನ ನಡುವೆಯೂ ಸಂತೋಷದ ಚಿತ್ರವನ್ನೇ ಬಿಡಿಸಿದ್ದನು. ಅವನ ದೃಷ್ಟಿಯೇ ಇತರರ ಜೀವನದ ದೃಶ್ಯವನ್ನು ಬದಲಿಸಿತ್ತು.

ಜೀವನದಲ್ಲಿ ಎಲ್ಲವೂ ನಮ್ಮ ದೃಷ್ಟಿಯ ಮೇಲೆ ಅವಲಂಬಿತವಾಗಿದೆ. ನಾವು ನೋಡುವ ರೀತಿಯೇ ನಮ್ಮ ಅನುಭವದ ಬಣ್ಣವನ್ನು ನಿರ್ಧರಿಸುತ್ತದೆ. ಸಕಾರಾತ್ಮಕ ದೃಷ್ಟಿ ಇರುವಾಗ ಕತ್ತಲೆಯಲ್ಲಿಯೂ ಬೆಳಕು ಕಾಣುತ್ತದೆ. ನಕಾರಾತ್ಮಕ ದೃಷ್ಟಿ ಇರುವಾಗ ಬೆಳಕಿನಲ್ಲಿಯೂ ಕತ್ತಲೆ ಕಾಣುತ್ತದೆ. **ನಾವು ಬದಲಾದರೆ, ಜಗತ್ತೇ ಬದಲಾಗುತ್ತದೆ.**

## ನಮ್ಮ ವಲಯದಲ್ಲಿ ಐಸಿರಿ





















ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



Rtn. PHF. ಗುರುಪ್ರಸಾದ್ ಕಾಮತ್

04 NOV

## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯಿಂದ "ಎಂಡ್ ಪೋಲಿಯೋ ವಾಕಥಾನ್"

ರೋಟರಿ ಇಂಟರ್ನ್ಯಾಷನಲ್ ನಿರ್ದೇಶನದಂತೆ ಪೋಲಿಯೋ ನಿರ್ಮೂಲನೆಗಾಗಿ ನಿಧಿ ಸಂಚಯನ ಜಾಥಾವನ್ನು ಪರ್ಕಳದ ರೋಟರಿ ಐಸಿರಿಯು ಏರ್ಪಡಿಸಿತ್ತು.

ಅಕ್ಟೋಬರ್ 17ರಂದು ನಡೆದ ಈ ವಾಕಥಾನ್ ಗೆ ಪೋಲಿಯೋ ನಿರ್ಮೂಲನ ವಿಭಾಗದ ರೋಟರಿ ಜಿಲ್ಲಾ ಚೇರ್ಮನ್ ರೊ. ಸುಬ್ರಹ್ಮಣ್ಯ ಬಾಸ್ರಿಯವರು ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿ, ಕಳೆದ ನಾಲ್ಕು ದಶಕಗಳಿಂದ ರೋಟರಿ ಸಂಸ್ಥೆಯು ವಿಶ್ವದಾದ್ಯಂತ ಪೋಲಿಯೋ ನಿರ್ಮೂಲನ ಕಾರ್ಯಕ್ರಮಕ್ಕೆ ಕೈಜೋಡಿಸಿದೆ. ಇದುವರೆಗೆ ಶೇಕಡ 99.9 ಯಶಸ್ಸನ್ನು ಸಾಧಿಸಿದ್ದರೂ, ಈ ಹಂತದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಕೈಬಿಟ್ಟರೆ, ಪುನಃ ಪೋಲಿಯೋ ಹಾವಳಿ ಹೆಚ್ಚಾಗಿ ವರ್ಷಕ್ಕೆ ಸುಮಾರು ಎರಡು ಲಕ್ಷದಷ್ಟು ಮಕ್ಕಳು ಅಪಾಯಕ್ಕಿಡಾಗುವ ಸಂಭವವಿದೆ. ಹಾಗಾಗಿ ಸಂಪೂರ್ಣವಾಗಿ ನಿರ್ಮೂಲನೆಗೈಯುವ ತನಕ ವಿರಮಿಸುವಂತಿಲ್ಲ. ಈ ನಿಟ್ಟಿನಲ್ಲಿ ರೋಟರಿ ಐಸಿರಿಯು ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಶ್ಲಾಘನೀಯವಾಗಿದೆ ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಪರ್ಕಳದ ಗಾಂಧಿ ಮೈದಾನದ ಬಳಿ ನಡೆದ ಈ ಸರಳ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೊ. ಅನಿಲ್ ಕುಮಾರ್ ವಹಿಸಿದ್ದರು. ವಲಯ ಸೇನಾನಿ ರೊ.ಸ್ಮಿತಾ ಜಿ. ಕಾಮತ್, ಆರ್ ಸಿ ಸಿ ಜಿಲ್ಲಾ ಉಪ ಸಭಾಪತಿ ರೊ. ಗುರುಪ್ರಸಾದ್ ಕಾಮತ್, ಜೋನಲ್ ಟ್ರೈನರ್ ರೊ. ಡಾ. ಎ. ಗಣೇಶ, ವಲಯ 4ರ ಪೋಲಿಯೋ ವಿಭಾಗದ ವಲಯ ಸಂಯೋಜಕರಾದ ರೊ. ಡಾ. ಪ್ರಭಾಕರ್ ರಂಜಾಳ್, ಸಮುದಾಯಸೇವಾ ನಿರ್ದೇಶಕ ರೊ.ಕೆ. ಪ್ರಕಾಶ ಶೆಣೈ, ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್, ರೋಟರಿ ಐಸಿರಿಯ ಗೃಹಪತ್ರಿಕೆ "ಐಶ್ವರ್ಯ" ಸಂಪಾದಕ ರೊ. ರಾಜೇಶ ಡಿ. ಶೆಣೈ, ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್, ನಿಕಟಪೂರ್ವ ಅಧ್ಯಕ್ಷ ರೊ. ಸುನಿಲ್ ಕುಮಾರ್, ರೊ. ಸುದರ್ಶನ್ ಎಸ್ ಪೈ, ರೊ. ನಿಧೀಶ್ ಕುಮಾರ್, ಶ್ರೀಮತಿ ರೂಪಶ್ರೀ, ಶ್ರೀಮತಿ ಪಲ್ಲವಿ ಉಪಸ್ಥಿತರಿದ್ದರು.

ರೋಟರಿ ಐಸಿರಿಯ ಕಾರ್ಯದರ್ಶಿ ರೊ. ಕೃಷ್ಣಪ್ಪ ವಂದನಾರ್ಪಣೆಗೈದರು.

ಬಳಿಕ ಪರ್ಕಳದ ಪ್ರಮುಖ ಬೀದಿಯಲ್ಲಿ ನಿಧಿ ಸಂಚಯನ ಕಾರ್ಯಕ್ರಮ ನಡೆಯಿತು.

**ರೋಟರಿ ಜಿಲ್ಲೆ 3182, ವಲಯ ನಾಲ್ಕರ 2026–27 ಸಾಲಿನ**

**ಸಹಾಯಕ ಗವರ್ನರ್ ರೊ. ಹೇಮಂತ್ ಯು. ಕಾಂತ್ ನೇತೃತ್ವದ ನಾಯಕತ್ವ ತಂಡ**




## "ಐಶ್ವರ್ಯ" 16 ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹದಿನಾರನೇ ಆವೃತ್ತಿಯನ್ನು** ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ 21/10/2025 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿ ಸದಸ್ಯರಾದ ರೊ. ರಾಮಕೃಷ್ಣ ಪೂಂಜಾ ಅವರ ಮಾತೃಶ್ರೀಯವರಾದ ಶ್ರೀಮತಿ ಕಮಲಾ ಎಂ. ಪೂಂಜಾ ರವರು ಅಕ್ಟೋಬರ್ 19ರಂದು ಸ್ವರ್ಗಸ್ಥರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು.

ರೋಟರಿ ಐಸಿರಿಯ ಸದಸ್ಯರು ಶ್ರೀಮತಿ ಕಮಲಾ ಪೂಂಜಾ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ, ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದ್ದಾರೆ.